# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ: LP.No. Ad.Com/WST/1236/19-20

ಸಹಾಯಕ ನಿರ್ದೇಶಕರವರ ಕಛೇರಿ
ನಗರ ಯೋಜನೆ (ಪಶ್ಚಿಮ)
ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ,
ಬೆಂಗಳೂರು. ದಿನಾಂಕ:15-10-2020

ಸಹಾಯಕ ನಿರ್ದೇಶಕರು (ಪಶ್ಚಿಮ) ನಗರ ಯೋಜನೆ ಬೃ.ಬೆಂ.ಮ.ಪಾ.
ನಂ............
ತಾ............

**ಅನುಸೂಚಿ(VII)**
(ಉಪ ವಿಧಿ ಸಂಖ್ಯೆ:5.3)

ವಿಷಯ:– LP.No. Ad.Com/WST/1236/19-20 ರ ಅನ್ವಯ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ನೀಡುವ ಬಗ್ಗೆ.

ಉಲ್ಲೇಖ:– 1. ನಕ್ಷೆ ಮಂಜೂರಾತಿ ಸಂಖ್ಯೆ:– LP.No. Ad.Com/WST/1236/19-20 ದಿನಾಂಕ:17–03–2020.
2. ಅರ್ಜಿದಾರರ ಮನವಿ ದಿನಾಂಕ:16–09–2020
3. ದಿನಾಂಕ:12–10–2020ರ ನಕ್ಷೆ ಮಂಜೂರಾತಿ ಸಮಿತಿ ಸಭೆಯ ನಡವಳಿ

********

ಸ್ವತ್ತಿನ ಸಂಖ್ಯೆ: 60, 3ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. ವಾರ್ಡ್ ಸಂಖ್ಯೆ:45 ಇಲ್ಲಿ ನಿರ್ಮಿಸಿರುವ ಬೇಸ್‌ಮೆಂಟ್, ತಳ, ನೆಲ, 1ನೇ, 2ನೇ 3ನೇ ಮತ್ತು ಟೆರಸ್ ಅಂತಸ್ಥಿನ ವಸತಿ/ಹಾಸ್ಟೆಲ್ ಕಟ್ಟಡಕ್ಕೆ ಈ ಕಛೇರಿಯಿಂದ LP.No. Ad.Com/WST/1236/19-20ದಿನಾಂಕ:17–03–2020 ರಂದು ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉಲ್ಲೇಖ (2) ರಲ್ಲಿನ ಅರ್ಜಿದಾರರ ಮನವಿ ಮೇರೆಗೆ ವಸತಿ/ಹಾಸ್ಟೆಲ್ ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ:24–09–2020 ರಂದು ಸ್ವತ್ತಿನ ಸ್ಥಳ ಪರಿಶೀಲಿಸಿದ್ದು, ಅರ್ಜಿದಾರರು ವಲಯ ನಿಯಮಾನುವಳಿಯಂತೆ ಅಗತ್ಯ ನಡು ಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಉಲ್ಲೇಖ (3) ರಲ್ಲಿ ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪಶ್ಚಿಮ ವಲಯದ ನಕ್ಷೆ ಮಂಜೂರಾತಿ ಸಮಿತಿಯು ಅನುಮೋದಿಸಿರುವ ಮೇರೆಗೆ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ.1,19,100/– (ಡಿಡಿ ನಂ–005926 ದಿನಾಂಕ:12–10–2020 Jammu And Kashmir Bank, Frazer Town Branch) ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ ಡಿ.ಡಿಯ ರಶೀದಿ ಸಂಖ್ಯೆ– RE-ifms210-TP/000033 ದಿನಾಂಕ:14–10–2020 ರಂದು ಸಂದಾಯಿಸಿಕೊಳ್ಳಲಾಗಿದೆ ವಸತಿ/ಹಾಸ್ಟೆಲ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೆ ಒಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು, ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿಯ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ ನಿಗಧಿತ ಅವಧಿಯೊಳಗೆ ಅಗತ್ಯ ಮಾರ್ಪಡು ನಕ್ಷೆಗೆ ಮಂಜೂರಾತಿ ಪಡೆದು ನಂತರ ಕಾಮಗಾರಿಯನ್ನು ಮುಂದುವರಿಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸಿರುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ ಅಗತ್ಯ ಸಂಖ್ಯೆಯ ವಾಹನ ನಿಲ್ದಾಣಕ್ಕೆ ಸ್ಥಳಾವಕಾಶವನ್ನು ಕಾಯ್ದಿರಿಸುವುದು.

Scanned with CamScanner

4. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಕೆಲಸಗಾರರಿಗೆ ತಾತ್ಕಲಿಕ ಶೌಚಾಲಯವನ್ನು ನಿರ್ಮಿಸತಕ್ಕದ್ದು.
5. ಕಟ್ಟಡ ಕಾಮಗಾರಿ ಸ್ಥಳದಲ್ಲಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

15/10/2020

ಸಹಾಯಕ ನಿರ್ದೇಶಕರು
ನಗರ ಯೋಜನೆ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇವರಿಗೆ,

1. Smt. B.M Shailaja , 2. Sri.CM Krishna Murthy, 3. Sri.Krishna H Kolekar , Sri Suresh H Kolekar Jadav H Kolekar 4. Smt.Kavitha K 5. Smt.Rekha Swaminathan 6. Sri A V Jayaram 7. Sri.S Rajgopal 8.Smt. C M Paravthamma. #60, 3th Main Road, Malleshwaram, Bangalore.

ಪ್ರತಿಯನ್ನು:-ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ)/ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಲ್ಲೇಶ್ವರಂ)ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

Received
15/10/2020
984544463

Scanned with CamScanner